ಇಟ್ಟುಕೊಂಡಿರುತ್ತೀರಿ. ಹೀಗೆ ಮಾಡಿರುವುದರಿಂದ ಸರ್ಕಾರದ ನೀತಿ ಏನು ಎಂದು ಕೇಳುತ್ತೇನೆ. ಆ ಪಕ್ಷದಲ್ಲಿದ್ದ ಸದಸ್ಯರು ನಿಮ್ಮ ಪಕ್ಷಕ್ಕೆ ಬಂದಿರುತ್ತಾರೆಂದು ಇಟ್ಟುಕೊಂಡಿರುತ್ತೀರಾ ? ಬಾಯಲ್ಲಿ ಹೇಳುವುದು ಒಂದಾದರೆ ಕೃತಿಯಲ್ಲಿ ಮಾಡುವುದು ಬೇರೆಯಾಗಿರುತ್ತದೆ.

MR. SPEAKER.—This is a very specific question pertaining to Hassan District.

SRI MOILY.—Sir, This is a general Question. ಇದು ಒಂದು ಸಾಮಾನ್ಯ ಪಶ್ನೆಯಾಗಿರುವುದರಿಂದ ಇದಕ್ಕೆ ಉತ್ತರವನ್ನು ಕೊಡಬೇಕೇ ಬೇಡವೇ ಎಂದು ತಮ್ಮನ್ನೇ ಕೇಳುತ್ತಿದ್ದೇನೆ.

ಅಧ್ಯಕ್ಷರು.—ಇದು ಒಂದು ಸ್ಪೆಸಿಫಿಕ್ ಕ್ವಶ್ಚನ್ ಆಗಿರುವುದರಿಂದ ತಾವು ಉತ್ತರ ಕೊಡಬೇಕು ಎಂದು ಹೇಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೇ ನನ್ನ ಪ್ರಶ್ನೆಗೆ ಸಂಬಂಧ ಪಟ್ಟ ಹಾಗೆ ಅರ್ಬನ್ ಡೆವಲೆಪ್‌ಮೆಂಟ್ ವಿಷಯವಾಗಿ ಉತ್ತರವನ್ನು ಕೊಡಬೇಕಾಗಿದೆ. ಅದನ್ನು ಬಿಟ್ಟು ಮಾನ್ಯ ಅರ್ಥ ಮಂತ್ರಿಗಳು ನೀತಿಯನ್ನು ಉಪದೇಶ ಮಾಡಿದ್ದರಿಂದ ಅದಕ್ಕೆ ಒಂದು ಉದಾಹರಣೆಯನ್ನು ಹೇಳುತ್ತಾ ಇದ್ದೇನೆ. ನಾನ್ ಆಫಿಷಿಯಲ್ ಚೇರ್‌ಮನ್‌ಗಳಾಗಿರತಕ್ಕಂಥ ಕೆಲವು ಬೋರ್ಡ್‌ಗಳನ್ನು ತೆಗೆದು ಹಾಕಿರುವುದು ಸ್ವಾಗತಾರ್ಹವಾಗಿದ್ದರೂ ಚೀಫ್ ಸೆಕ್ರೆಟರಿಯವರು ಎಲ್ಲ ವಿಷಯಗಳನ್ನು ವಿಚಾರ ಮಾಡುತ್ತಿದ್ದಾರೆಂದು ಹೇಳಿದ ಮೇಲೆ, ಕೆಲವು ಬೋರ್ಡ್‌ಗಳನ್ನು ಇಟ್ಟುಕೊಂಡು ಕೆಲವು ಬೋರ್ಡ್‌ಗಳನ್ನು ತೆಗೆದು ಹಾಕುವುದಕ್ಕಿಂತ ಎಲ್ಲವನ್ನು ತೆಗೆದು ಹಾಕಿಬಿಡಿ. ಸರ್ಕಾರ ಈ ಬಗ್ಗೆ ಯಾವ ರೀತಿ ಕ್ರಮ ತೆಗೆದುಕೊಳ್ಳುತ್ತದೋ ಆ ರೀತಿ ತೆಗೆದುಕೊಳ್ಳಲು ಸಾಧ್ಯವಾಗಲಿ ಎಂದು ನಾನು ಕೇಳುತ್ತೇನೆ. ಇದಕ್ಕೆ ಮಾನ್ಯ ಸಚಿವರಿಂದ ಉತ್ತರ ಬರಲೇಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ.—ಹಾಸನ ಸಿಟಿಗೆ ಟ್ರಸ್ಟ್ ಬೋರ್ಡ್ ಕೊಡುವ ಬಗ್ಗೆ ಪ್ರಶ್ನೆ ಕೇಳಿದ್ದರೆ ಅದಕ್ಕೆ ಉತ್ತರವನ್ನು ಕೊಡುತ್ತಿದ್ದೆ. ಆದರೆ ಸರ್ಕಾರದ ನೀತಿಯ ಬಗ್ಗೆ ಪ್ರಶ್ನೆ ಕೇಳಿದ್ದರಿಂದ ಇದೆಲ್ಲವನ್ನು ಹೇಳಬೇಕಾಗಿರುತ್ತದೆ. ಅವರು ನೇರವಾಗಿ ಪ್ರಶ್ನೆಯನ್ನು ಕೇಳಲಿ ; ಉತ್ತರವನ್ನು ಕೊಡುತ್ತೇನೆಂದು ಹೇಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ —ನಾನು ಕೇಳುವುದರೊಳಗೆ ಅರ್ಥವಿದೆ. In this House policy statement is vehemently made by the Hon. Minister, I would like to bring to the notice of the Hon. Minister and the House that the policy statement is not followed and there is violation. Certain members who have crossed, have been allowed to retain the Chairmanship of certain Corporations and Boards.

## M. Krishna Out Patient Hospital

116 SRI K. H. HANUME GOWDA (Hassan).—Will the Chief Minister be pleased to state.—

(a) the date on which M. Krishna Out Patient Hospital was started in Newline Street Area, Hassan Town ;

(b) whether, the said Hospital is run by the Government or Municipality ;

(c) if the Hospital is run by the Municipality, under what rules the Government has accorded sanction for this Hospital ;

(d) the average number of patients who come to this Hospital per day ;

e) the details of the staff working in this Hospital ;

(f) the average amount spent on medicines in this Hospital per day ?

SRI R. GUNDU RAO (Chief Minister).—

(a) It was started on 6-12-1976.

(b) This Hospital is run by Hassan Municipality.

(c) Government has not sanctioned this Hospital.

(d) An average of 110 patients come to this Hospital every day.

(e) The following staff is appointed by the Hassan Municipality

| | | | |
|---|---|---|---|
| 1. | Nurse | ... | 1 |
| 2. | Vaccinater | ... | 1 |
| 3. | Peons | . | 2 |

(f) Medicines of an average worth Rs. 25/- are being spent per day.

ಶ್ರೀ ಕೆ. ಎಚ್. ಹನುಮೇಗೌಡ.—ಈ ಕೃಷ್ಣ ಔಟ್ ಪೇಷೆಂಟ್ ಹಾಸ್ಪೆಟಲ್‌ಗೂ, ಡಿಸ್ಪೆನ್ಸ್ಕ್ ಹಾಸ್ಪೆಟಲ್‌ಗೂ ಸುಮಾರು ೨ ಮೈಲಿ ಆಗುತ್ತದೆ. ಈ ಔಟ್ ಪೇಷೆಂಟ್ ಹಾಸ್ಪೆಟಲ್ ಇರುವ ಜಾಗದ ಪಕ್ಕದಲ್ಲಿ ಎರಡು ಸ್ಲಮ್ಸ್ ಕೂಡಾ ಇದೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಶ್ರೀ ಎ. ಕೆ. ಅಬ್ದುಲ್ ಸಮದ್.—ಬಂದಿದೆ.

ಶ್ರೀ ಕೆ. ಎಚ್. ಹನುಮೇಗೌಡ.—ಆಲ್ಲಿಗೆ ೧೧೦ ಜನರು ಬರುತ್ತಾರೆಂದು ತಾವು ತಿಳಿಸಿದ್ದೀರಿ. ಇಲ್ಲಿ ಪ್ರತಿಯೊಬ್ಬರಿಗೂ ೨೫ ರೂಪಾಯಿ ಬೆಲೆ ಬಾಳುವ ಔಷಧಿ ಸಿಕ್ಕುತ್ತಿದೆಯೇ ? ಇದುವರೆವಿಗೂ ಎಷ್ಟು ರೂಪಾಯಿಯ ಔಷಧಿಯನ್ನು ಕೊಟ್ಟಿದ್ದಾರೆ. ತಿಳಿಸಿ.

ಶ್ರೀ ಎ. ಕೆ. ಅಬ್ದುಲ್ ಸಮದ್.—ಇದು ಮುನಿಸಿಪಾಲಿಟಿಯವರು ನಡೆಸತಕ್ಕ ಆಸ್ಪತ್ರೆ. ಇದಕ್ಕೆ ಡೋನರ್ಸ್ ೧೫,೦೦೦ ರೂಪಾಯಿಯನ್ನು ಕೊಟ್ಟಿದ್ದಾರೆ. ಮುನಿಸಿಪಾಲಿಟಿಯವರು ೨೫ ರೂಪಾಯಿಯ ಔಷಧಿಯನ್ನು ಪ್ರತಿಯೊಬ್ಬರಿಗೂ ಕೊಡುತ್ತಾರೆ.

ಶ್ರೀ ಕೆ. ಎಚ್. ಹನುಮೇಗೌಡ,—ನಾನು ಸುಮಾರು ೮-೧೦ ಸಾರಿ ಈ ಆಸ್ಪತ್ರೆಗೆ ಹೋಗಿದ್ದೇನೆ. ಯಾವಾಗ ಆಲ್ಲಿಗೆ ಹೋದರೂ ಆಲ್ಲಿ ಯಾವ ವಿಧವಾದ ಔಷಧಿ ಇರುವುದಿಲ್ಲ. ಒಂದೂವರೆ ಸಾವಿರ ರೂಪಾಯಿ ಸಂಬಳ ಪಡೆಯತಕ್ಕ ಎಂ.ಬಿ.ಬಿ.ಎಸ್. ಡಾಕ್ಟರ್ ಆಲ್ಲಿ ಇದ್ದಾರೆ, ಇಬ್ಬರು ನರ್ಸ್, ಇಬ್ಬರು ಪೀಪನ್ಸ್, ಎರಡು ಮುರುಕಲು ಖುರ್ಚಿ, ಸ್ಟೂಲ್‌ಗಳು ಆಲ್ಲಿ ಇವೆ. ಒಂದು ಡಾಕ್ಟರ್ ಬಳಸತಕ್ಕ ಸ್ಟೆತಸ್ಕೋಪ್ ಇದೆ. ಆಲ್ಲಿ ಔಷಧಿ ಇಲ್ಲ. ಯಾವ ಪುರುಷಾರ್ಥಕ್ಕೆ ಈ ಆಸ್ಪತ್ರೆ ಇದೆ ಎಂಬುದನ್ನು ದಯಮಾಡಿ ತಿಳಿಸಬೇಕು.

ಶ್ರೀ ಎ. ಕೆ. ಅಬ್ದುಲ್ ಸಮದ್. —ಅದು ಸರ್ಕಾರಿ ಆಸ್ಪತ್ರೆ ಅಲ್ಲ. ಅದು ಮುನಿಸಿಪಾಲಿಟಿಯವರ ಆಡಳಿತದಲ್ಲಿ ಇರತಕ್ಕದ್ದು. ಅದಕ್ಕೆ ಒಬ್ಬ ಡಾಕ್ಟರ್‌ನ್ನು ಕೊಟ್ಟಿದ್ದೇವೆ. ಅದಕ್ಕೆ ಬೇರೆ ಸಮ್ಮಿಂದ ಏನು ಆಗುತ್ತದೋ ಅದನ್ನು ಕೊಡುತ್ತೇವೆ.

ಶ್ರೀ ಕೆ. ಎಚ್. ಹನುಮೇಗೌಡ.—ಇಲ್ಲಿ ಪ್ರತಿಯೊಬ್ಬರಿಗೆ ೨೫ ರೂಪಾಯಿಗಳ ಔಷಧಿಯನ್ನು ಕೊಡಲು ಮುನಿಸಿಪಾಲಿಟಿಯವರು ಹಣ ಕೊಡುತ್ತಾರೆಂದು ಹೇಳಿದ್ದೀರಿ. ಇಲ್ಲಿ ಔಷಧಿಯನ್ನು ಕೊಡುತ್ತಾ ಇಲ್ಲ, ಒಂದು ಸಾರಿ ಒಬ್ಬ ಕಾಲಿಗೆ ಗಾಯ ಆಗಿದೆ ಟೀಚರ್ ಹಾಕಿ ಎಂದು ಬಂದ. ಅದಕ್ಕೆ ಆಲ್ಲಿಯವರು ನಮ್ಮಲ್ಲಿ ಯಾವುದೂ ಇಲ್ಲ, ಟಿಂಚರ್ ಸಪ್ಲೈ ಆಗುತ್ತಾ ಇಲ್ಲ ಎಂದು ಹೇಳಿದರು. ಇದು ಬಹಳ ಬಡ

ಜನರೇ ೫ ಕಿಲೋಮೀಟರ್ ದೂರ. ಶ್ರೀ ಕೃಷ್ಣ ಎನ್ನುವವರು ಇಲ್ಲಿಯ ಜನರು ೨ ಮೈಲಿ ದೂರ ಇರುವ ಆಸ್ಪತ್ರೆಗೆ ಹೋಗಲು ಕಷ್ಟ ಆಗುತ್ತದೆಂದು ದೊಡ್ಡ ಮನಸ್ಸು ಮಾಡಿ ಈ ಆಸ್ಪತ್ರೆಯನ್ನು ಕಟ್ಟಿಸಿಕೊಟ್ಟರು. ಅದು ಈ ರೀತಿ ನಡೆಯುತ್ತಿದೆ. ಇಲ್ಲಿ ಔಷಧಿಗಳು ಸಿಕ್ಕುತ್ತಿಲ್ಲ. ಈ ಬಗ್ಗೆ ವಿಚಾರ ಮಾಡಬೇಕಾಗುತ್ತದೆ.

ಶ್ರೀ ಎ. ಕೆ. ಅಬ್ದುಲ್ ಸಮದ್.—ಸ್ವಾಮಿ, ಈ ಕಂಪ್ಲೈಂಟ್ ಏನಿದೆ ಇದನ್ನು ನಾನು ವಿಚಾರಿಸುತ್ತೇನೆ.

ಶ್ರೀ ಕೆ. ಎಚ್. ಹನುಮೇಗೌಡ.—ಇದು ಕಂಪ್ಲೈಂಟ್ ಅಲ್ಲಾ ಸ್ವಾಮಿ. ಇದು ವಾಸ್ತವ ಸಂಗತಿ. ಇಲ್ಲಿಗೆ ಸಾಕಷ್ಟು ಔಷಧಿಯನ್ನು ಒದಗಿಸಬೇಕು, ಇಲ್ಲವೇ ಈ ಆಸ್ಪತ್ರೆಯನ್ನು ಸರ್ಕಾರವೇ ವಹಿಸಿಕೊಳ್ಳಬೇಕು. ಸರ್ಕಾರದವರು ಇದರ ಆಡಳಿತವನ್ನು ವಹಿಸಿಕೊಂಡು ಸಾಕಷ್ಟು ಔಷಧಿಗಳನ್ನು ಅಲ್ಲಿಗೆ ಒದಗಿಸುವ ವ್ಯವಸ್ಥೆ ಮಾಡಬೇಕು.

SRI A. K. ABDUL SAMAD.—I will just look into the matter.

MR. SPEAKER.—Questions are over.

## QUESTIONS FOR ANSWERS ON THE DAY

### (but not taken up)

### Pollution of Water by Mandya Sugar Factory etc.,

126. SRI G. MADE GOWDA (Kirugaval).—Will the Minister for Health and Family Welfare be pleased to state.—

(*a*) whether the discharged and Polluted Water from the Sugar factories in Mandya District namely: Mandya Sugar Factory, and Kalamuddanadoddi Sugar Factories, is being let out to Hebbala Stream near Mandya;

(*b*) whether this polluted water emits a bad smell in the stream and the water of the stream polluted is causing diseases to the animals and the men as the water is used, for drinking and washing purposes;

(*c*) if so, the action taken by the Government to prevent the Pollution of Water of this Stream?

SRI A. K. ABDUL SAMAD (Minister for Health and Family Welfare).—

(*a*) M/s, Mysore Sugar Co., Ltd., Mandya are discharging effluents both from Sugar factory and the distilleries into Hebballa stream near Chikkamandya.

M/s Chamundeswari Sugar Ltd., Kalamuddanadoddi are discharging effluents into a natural valley leading to Sulekere distributary (irrigation) canal which ultimately joins Hebballa Stream.

(*b*) The Polluted water emits odour. It is not established that diseases caused exclusively due to effluents from these industries.

(*c*) The Karnataka State Board for Prevention and Control of Water pollution had directed M/s. Mysore Sugar Co., Ltd., to put up suitable treatment units to treat the effluents to the prescribed standards. They have assured that all earnest efforts will be made to complete the works at an early date.